ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೊಂದನೆಯ ಅಧಿವೇಶನ
ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ಅರಣ್ಯ ಪ್ರದೇಶದ ವಿಸ್ತೀರ್ಣ ಹಾಗೂ ಅತಿಕ್ರಮಣ ಪ್ರದೇಶಗಳ ಬಗ್ಗೆ

ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

890 (836) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಾರವಾರ ಜಿಲ್ಲೆಯಲ್ಲಿರುವ ಪ್ರತಿಯೊಂದು ವಲಯದಲ್ಲಿ ಇರುವ ಅರಣ್ಯ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ; (ಸರ್ವೆ ನಂ. ವಿಸ್ತೀರ್ಣ, ಹೋಬಳಿ, ಗ್ರಾಮ ಸಹಿತ ವಿವರ ಒದಗಿಸುವುದು)

(ಆ) ಅರಣ್ಯ ಪ್ರದೇಶದÀ ಜಮೀನನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ; (ಹೋಬಳಿ ಗ್ರಾ. ಸ. ನಂ., ವಿಸ್ತೀರ್ಣ ಸಹಿತ ಒತ್ತುವರಿ ಪೂರ್ಣ ಮಾಹಿತಿ ಒದಗಿಸುವುದು)

(ಇ) ಒತ್ತುವರಿ ಮಾಡಿಕೊಂಡಿರುವ ರೈತರುಗಳಿಗೆ ಸರ್ಕಾರ ವಿಧಿಸಿರುವ ದಂಡದ ಮೊತ್ತವೆಷ್ಟು ; (ಹೋಬಳಿ, ಗ್ರಾ. ಸ. ನಂ., ವಿಸ್ತೀರ್ಣ ಸಹಿತ ಒತ್ತುವರಿ ಮಾಹಿತಿ ನೀಡುವುದು)

(ಈ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯನ್ನೇ ನಂಬಿ ಜೀವನ ಸಾಗಿಸುತ್ತಿರುವ ಬಡ ಕುಟುಂಬಗಳ ರೈತರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ ;

(ಉ) ಕಾರವಾರ ಜಿಲ್ಲೆಯಲ್ಲಿ ಎಷ್ಟು ಜನ ಒತ್ತುವರಿದಾರರಿಗೆ ಭೂ ಮಂಜೂರಾತಿ ನೀಡಲಾಗಿದೆ? (ಒತ್ತುವರಿದಾರರ ಹೆಸರು, ಗ್ರಾಮ, ಹೋಬಳಿವಾರು ಗ್ರಾ. ಸ. ನಂ. ವಿಸ್ತೀರ್ಣ ಹಾಗೂ ಮಂಜೂರಾತಿ ಪತ್ರದ ನಕಲು ಸಹಿತ ತಾಲ್ಲೂಕುವಾರು/ಜಿಲ್ಲಾವಾರು ಮಾಹಿತಿ ಒದಗಿಸುವುದು)